ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ಹಳ್ಳ ಯೋಜನೆ ಬಗ್ಗೆ

೨೦೨. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ಯೋಜನೆಯನ್ನು ೧೯೯೦-೯೧ರ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ ;

ಆ) ಹಾಗಿದ್ದಲ್ಲಿ ಈ ನೀರಾವರಿ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಈ ಯೋಜನೆಗೆ ೧೩೧ ಹೆಕ್ಟೇರ್ ಅರಣ್ಯಭೂಮಿ ಬಿಡುಗಡೆಯಾಗಬೇಕಾಗಿದ್ದು, ಇದರಲ್ಲಿ ೩೪೬೯ ಬೆಲೆಬಾಳುವ ಮರಗಳಿದ್ದು, ಇವುಗಳ ಮೌಲ್ಯ ಸುಮಾರು ೧೧.೦೬ ಕೋಟಿ ರೂ. ಗಳಾಗುವುದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಬೇಕಾಗುವ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲಂ ಸಾಧ್ಯವಿಲ್ಲವೆಂದು ನಿರ್ಧರಿಸಿರುವುದರಿಂದ ಈ ಕಾಮಗಾರಿಯನ್ನೂ ಕೈಗೊಳ್ಳಲು ಸಾಧ್ಯವಿಲ್ಲ.

ತುಂಗಾ ನದಿಗೆ ಅಪ್ಪರ್ ತುಂಗಾ ಅಣೆಕಟ್ಟಿನ ಬಗ್ಗೆ

೨೦೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ನದಿಗೆ 'ಅಪ್ಪರ್ ತುಂಗಾ' ಅಣೆಕಟ್ಟನ್ನು ಕಟ್ಟುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಹಾಗಿದ್ದಲ್ಲಿ ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇದೆ. ಯೋಜನೆಯ ವರದಿಯನ್ನು ತಾಂತ್ರಿಕ ಸಮಿತಿ ಶಿಫಾರಸ್ಸು ಪಡೆದು ಹಾಗೂ ಕೇಂದ್ರ ಸರ್ಕಾರದ ಬಿಡುಗಡೆ ಹೊಂದಿದನಂತರ.

ಬಿಜಾಪುರ ಜಿಲ್ಲೆಯ ಮುಳವಾಡ ಯಾತ ನೀರಾವರಿ ಬಗ್ಗೆ

೨೦೪. ಶ್ರೀ ಬಿ. ಎಸ್. ಪಾಟೀಲ್ (ಹೂವಿನ ಹಿಪ್ಪರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ನದಿಗೆ ಮುಳವಾಡ ಯಾತ ನೀರಾವರಿ ಯೋಜನೆಗೆ ಹಿಂದಿನ ಮುಖ್ಯ ಮಂತ್ರಿಗಳು ಅಡಿಗಲ್ಲು ಹಾಕಿದ್ದು ಸರ್ಕಾರಕ್ಕೆ ತಿಳಿದಿದೆಯೇ ;

ಆ) ಹಾಗಿದ್ದಲ್ಲಿ ಅದಕ್ಕೆ ತಾಂತ್ರಿಕ ಹಾಗೂ ಹಣಕಾಸಿನ ಮಂಜೂರಾತಿ ದೊರತಿದೆಯೆ ಹಾಗಿದ್ದಲ್ಲಿ ಯಾವಾಗ ಹಾಗೂ ಎಷ್ಟು ಹಣ ಮಂಜೂರಾಗಿದೆ ;

ಇ) ಸದರಿ ಕೆಲಸವನ್ನು ಈ ವರ್ಷ ಪ್ರಾರಂಭಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಡಿಸೆಂಬರ್ ೧೯೮೫ರಲ್ಲಿ ಆಡಳಿತ ಮಂಜೂರಾತಿ ಹಾಗೂ ಜನವರಿ ೧೯೮೬ರಲ್ಲಿ ತಾಂತ್ರಿಕ ಮಂಜೂರಾತಿ ಪಡೆದ ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಪರಿಷ್ಕೃತ ಅಂದಾಜಿನಲ್ಲಿ ಮುಳವಾಡ ವಿತ ನೀರಾವರಿ ಯೋಜನೆಯು ಹೆಡ್ ವರ್ಕ್ಸ್‌ಗಾಗಿ ೧೯.೩೫ ಕೋಟಿ ರೂ.ಗಳ ಅವಕಾಶವಿದೆ.

ಇ) ವಿವರವಾದ ಅನ್ವೇಷಣೆ ನಡೆಯುತ್ತಿದ್ದು ವಿವರವಾದ ಅಂದಾಜು ಪಟ್ಟಿಗೆ ಅನುಮೋದನೆ ದೊರಕಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.